CAREERINDIA



ಸಂಕೇತ ಸಂಖ್ಯೆ : **85-K** ವಿಷಯ : ಸಮಾಜ ವಿಜ್ಞಾನ

**Code No. : 85-K** **Subject : SOCIAL SCIENCE**

**( ಕನ್ನಡ ಭಾಷಾಂತರ / Kannada Version )**

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

www.careerindia.com

CAREERINDIA



ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

I. 1. ಗವರ್ನರ್ ಜನರಲ್ ಡಾಲ್‌ಹೌಸಿ 'ಸಾರ್ವಜನಿಕ ಕಾಮಗಾರಿ ಇಲಾಖೆ'ಯನ್ನು ಇದರ ಅಭಿವೃದ್ಧಿಗಾಗಿ ಸ್ಥಾಪಿಸಿದನು

(A) ಸಂಚಾರ ವ್ಯವಸ್ಥೆ (B) ಶಿಕ್ಷಣ

(C) ಕೈಗಾರಿಕೆ (D) ಕಂದಾಯ ವ್ಯವಸ್ಥೆ

2. 1853 ರ ಸನ್ನದು ಶಾಸನವು ಭಾರತದ ಸಂವಿಧಾನಾತ್ಮಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಏಕೆಂದರೆ

(A) ಇದರಿಂದ ಪ್ರಾಂತ್ಯಗಳ ಶಾಸನ ಸಭೆಯು ವಿಸ್ತಾರವಾಯಿತು

(B) ಇದರಿಂದ ಪ್ರತ್ಯೇಕ ಮತೀಯ ಆಧಾರದ ಮೇಲೆ ಚುನಾವಣೆಯನ್ನು ಪರಿಚಯಿಸಲಾಯಿತು

(C) ಇದು ಪರಿಣಾಮಕಾರಿ ಶಾಸಕಾಂಗವನ್ನು ಸೃಷ್ಟಿಸಿತು

(D) ಇದರಿಂದ ಸರ್ಕಾರಿ ಸೇವೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜಾರಿಗೆ ತರಲಾಯಿತು

3. ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಪ್ರಥಮ ಮಹಿಳೆ

(A) ಜಾನ್ಸಿ ರಾಣಿ ಲಕ್ಷ್ಮೀಬಾಯಿ (B) ರಾಣಿ ಚೆನ್ನಮ್ಮ

(C) ಬೇಗಂ ಹಜರತ್ ಮಹಲ್ (D) ಒನಕೆ ಓಬವ್ವ

www.careerindia.com

CAREERINDIA



4. ಸ್ವಾತಂತ್ರೋತ್ತರ ಭಾರತದಲ್ಲಿ ಸರದಾರ್ ವಲ್ಲಭಭಾಯಿ ಪಟೇಲರು ಎಂದೆಂದಿಗೂ ಸ್ಮರಿಸಲ್ಪಡುತ್ತಾರೆ. ಏಕೆಂದರೆ

   (A) ಅವರು ಭಾರತದ ಪ್ರಧಾನ ಮಂತ್ರಿಯಾಗಿದ್ದರು

   (B) ಪಾಂಡಿಚೇರಿ ವಿಮೋಚನೆಗೆ ಸಹಾಯ ಮಾಡಿದರು

   (C) ಅವರು ದೇಶೀಯ ಅರಸರ ಸಂಸ್ಥಾನಗಳನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಿದರು

   (D) ಭಾಷಾವಾರು ಮಾದರಿಯಲ್ಲಿ ರಾಜ್ಯಗಳ ಪುನರ್ವಿಂಗಡನೆ ಮಾಡಿದರು

5. 'ಮುಂಜಿಗಿತ ನೀತಿ'ಯಿಂದ ಚೀನ ಇದರಲ್ಲಿ ಪ್ರಗತಿ ಹೊಂದಿತು

   (A) ಸಮಾಜ

   (B) ಆರ್ಥಿಕ ವ್ಯವಸ್ಥೆ

   (C) ಸಂಸ್ಕೃತಿ

   (D) ಸೈನಿಕ ಶಕ್ತಿ

6. ಅಮೆರಿಕಾ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಬಾಂಬ್ ದಾಳಿ ಮಾಡಿರದಿದ್ದರೆ

   (A) ಎರಡನೇ ಮಹಾಯುದ್ಧವು ಸಂಭವಿಸುತ್ತಿರಲಿಲ್ಲ

   (B) ಜಪಾನ್ ಶರಣಾಗುತ್ತಿರಲಿಲ್ಲ

   (C) ಜಪಾನ್ ಎರಡನೇ ಮಹಾಯುದ್ಧವನ್ನು ಪ್ರವೇಶಿಸುತ್ತಿರಲಿಲ್ಲ

   (D) ಜರ್ಮನಿ ಶರಣಾಗುತ್ತಿರಲಿಲ್ಲ

7. ರಜಾ ಅವಧಿಯಲ್ಲಿ 'ಚಿಣ್ಣರ ಅಂಗಳ' ಕಾರ್ಯಕ್ರಮವನ್ನು ಕೈಗೊಳ್ಳಲು ಉದ್ದೇಶ

   (A) ಮಧ್ಯಾಹ್ನದ ಊಟ ನೀಡಲು

   (B) ವಯಸ್ಕರಿಗೆ ಶಿಕ್ಷಣ ನೀಡಲು

   (C) ಮಕ್ಕಳನ್ನು ಶಾಲೆಗೆ ಆಕರ್ಷಿಸಲು

   (D) ಗ್ರಾಮೀಣ ಜನರಿಗೆ ಶಿಕ್ಷಣ ನೀಡಲು

www.careerindia.com

CAREERINDIA



8. ಭಾರತ ಸರ್ಕಾರವು ಈ ಉದ್ದೇಶಕ್ಕಾಗಿ 'ಕಾಫಿಪೊಸಾ' ( COFEPOSA ) ಶಾಸನವನ್ನು ರಚಿಸಿದೆ

(A) ವಿದೇಶೀ ವಿನಿಮಯ ಉಳಿಕೆ ಹಾಗೂ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು

(B) ಬಡತನವನ್ನು ನಿರ್ಮೂಲನೆ ಮಾಡಲು

(C) ವರದಕ್ಷಿಣೆ ಪದ್ಧತಿಯನ್ನು ತೊಡೆದು ಹಾಕಲು

(D) ಸಮಾಜದಿಂದ ಕುರುಡು ನಂಬಿಕೆಗಳನ್ನು ತೆಗೆದುಹಾಕಲು

9. ಮಾನವ ಹಕ್ಕುಗಳಿಗಾಗಿ ಹೋರಾಟ ನಡೆಸಲು ಪ್ರೇರಕವಾದ ಎರಡು ಘಟನೆಗಳೆಂದರೆ

(A) ಚೀನಾ ಕ್ರಾಂತಿ ಮತ್ತು ರಷ್ಯಾ ಕ್ರಾಂತಿ

(B) ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಒಂದನೇ ಮಹಾಯುದ್ಧ

(C) ಜರ್ಮನಿ ಏಕೀಕರಣ ಮತ್ತು ಇಟಲಿ ಏಕೀಕರಣ

(D) ಅಮೆರಿಕಾ ಸ್ವಾತಂತ್ರ್ಯ ಹೋರಾಟ ಮತ್ತು ಫ್ರಾನ್ಸ್ ಕ್ರಾಂತಿ

10. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದಲ್ಲಿ ಈ ಕಾರಣಕ್ಕಾಗಿ ಪಂಜಾಬ್‌ನಿಂದ ಹಿಂದಿರುಗಲು ಆರಂಭಿಸುತ್ತವೆ

(A) ಉಷ್ಣತೆಯಲ್ಲಿ ಏರಿಕೆ ಮತ್ತು ವಾಯು ಒತ್ತಡದಲಿ ಇಳಿಕೆ

(B) ಉಷ್ಣತೆಯಲ್ಲಿ ಇಳಿಕೆ ಮತ್ತು ವಾಯು ಒತ್ತಡದಲ್ಲಿ ಏರಿಕೆ

(C) ಉಷ್ಣತೆ ಮತ್ತು ವಾಯು ಎರಡರಲ್ಲೂ ಒತ್ತಡದಲ್ಲಿ ಇಳಿಕೆ

(D) ಉಷ್ಣತೆ ಮತ್ತು ವಾಯು ಎರಡರಲ್ಲೂ ಒತ್ತಡದಲ್ಲಿ ಏರಿಕೆ

11. 'ವನಮಹೋತ್ಸವ' ಕಾರ್ಯಕ್ರಮದ ಗುರಿ

(A) ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಸಾವಿರಾರು ಸಸಿಗಳನ್ನು ನೆಡುವುದು

(B) ಕಾಡುಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ರಾಷ್ಟ್ರೀಕರಣ ಗೊಳಿಸುವುದು

(C) ಮಾಲಿನ್ಯದ ಬಗ್ಗೆ ತಿಳುವಳಿಕೆ ಮೂಡಿಸುವುದು

(D) ವನ್ಯಜೀವಿಗಳನ್ನು ಸಂರಕ್ಷಿಸುವುದು



www.careerindia.com

CAREERINDIA



12. ಪೆಟ್ರೋಲಿಯಂ ಅನ್ನು 'ದ್ರವರೂಪದ ಚಿನ್ನ' ಎಂದು ಕರೆಯುವರು. ಏಕೆಂದರೆ,
   (A) ಇದು ಚಿನ್ನಕ್ಕಿಂತ ಹೆಚ್ಚು ಬೆಲೆಬಾಳುತ್ತದೆ
   (B) ಇದು ಚಿನ್ನದಂತೆ ಹೊಳೆಯುತ್ತದೆ
   (C) ಇದನ್ನು ಸಕಲ ಆರ್ಥಿಕ ಚಟುವಟಿಕೆಗಳ ಬಳಸಲಾಗುತ್ತದೆ
   (D) ಇದು ಶೀಘ್ರ ಜ್ವಲನಕಾರಿ

13. ಇದು ಖನಿಜಾಧಾರಿತ ಕೈಗಾರಿಕೆಗೆ ಒಂದು ಉದಾಹರಣೆಯಾಗಿದೆ
   (A) ಸಕ್ಕರೆ ಕೈಗಾರಿಕೆ
   (B) ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
   (C) ಹತ್ತಿ ಬಟ್ಟೆ ಕೈಗಾರಿಕೆ
   (D) ಸೆಣಬಿನ ಕೈಗಾರಿಕೆ

14. ಇದು ಭಾರತದ ಅತ್ಯಂತ ಪುರಾತನ ರಫ್ತಿನ ಸರಕು
   (A) ಸೆಣಬು
   (B) ಕಚ್ಚಾ ಹತ್ತಿ
   (C) ಕಬ್ಬಿಣದ ಅದಿರು
   (D) ಸಾಂಬಾರ ಪದಾರ್ಥಗಳು

15. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷಗಳಲ್ಲಿ ಕೃಷಿ ಬೆಳವಣಿಗೆಯಲ್ಲಿ ವಿಫಲತೆ ಹೊಂದಲು ಕಾರಣ
   (A) ಭಾರತ–ಪಾಕ್ ಯುದ್ಧ
   (B) ಭಾರತ–ಚೀನಾ ಯುದ್ಧ
   (C) ಭಾರತ–ಆಫ್ಘಾನ್ ಯುದ್ಧ
   (D) ಭಾರತ–ಬಾಂಗ್ಲಾ ಯುದ್ಧ

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಬಂಗಾಳದಲ್ಲಿ 'ದ್ವಿಮುಖ ಸರ್ಕಾರ'ವನ್ನು ಜಾರಿಗೆ ತಂದವನು .......................... .

17. ಈತನ ನಾಯಕತ್ವದಲ್ಲಿ ಉಗಾಂಡಾ ಸ್ವಾತಂತ್ರ್ಯವನ್ನು ಪಡೆದುಕೊಂಡಿತು .................... .



www.careerindia.com

CAREERINDIA



18. ಪ್ರತಿ ವರ್ಷ ನಾವು ಮಕ್ಕಳ ದಿನಾಚರಣೆಯನ್ನು ಆಚರಿಸುವುದು ........................ರಂದು.

19. ಭಾರತ ಅನುಭವಿಸುವ ವಾಯುಗುಣದ ವಿಧ .......................... .

20. ಕುಂಬಾರಿಕೆಯು ಈ ವಿಧದ ಕೈಗಾರಿಕೆಗೆ ಉತ್ತಮ ಉದಾಹರಣೆ .................... .

III. 21. ಈ ಕೆಳಗೆ ಕೊಟ್ಟಿರುವ ***A* ಪಟ್ಟಿ**ಯಲ್ಲಿನ ಅಂಶಗಳನ್ನು ***B* ಪಟ್ಟಿ**ಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : 5 × 1 = 5

| ***A* ಪಟ್ಟಿ** | ***B* ಪಟ್ಟಿ** |
|---|---|
| a) ಡಾ॥ ಬಿ.ಆರ್. ಅಂಬೇಡ್ಕರ್ | i) ಮೊದಲ ಗವರ್ನರ್ ಜನರಲ್ |
| b) ವಾರನ್ ಹೇಸ್ಟಿಂಗ್ಸ್ | ii) ಬ್ರಹ್ಮ ಸಮಾಜ |
| c) ಸ್ವಾಮಿ ವಿವೇಕಾನಂದ | iii) ಆರ್ಯ ಸಮಾಜ |
| d) ಡಾ॥ ಆತ್ಮಾರಾಂ ಪಾಂಡುಂಗ | iv) ಸಂವಿಧಾನ ಕರಡು ರಚನಾ ಸಮಿತಿ |
| e) ರಾಜಾ ರಾಮ್‌ಮೋಹನ್ ರಾಯ್ | v) ಮೊದಲ ಕಾನೂನು ಸದಸ್ಯ |
| | vi) ಪ್ರಾರ್ಥನಾ ಸಮಾಜ |
| | vii) ರಾಮಕೃಷ್ಣ ಮಿಷನ್ |
| | viii) ಥಿಯೋಸಾಫಿಕಲ್ ಸೊಸೈಟಿ |

IV. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : 9 × 1 = 9

22. 'ಸಹಾಯಕ ಸೈನ್ಯ ಪದ್ಧತಿ'ಯನ್ನು ಜಾರಿಗೆ ತಂದವರು ಯಾರು ?

www.careerindia.com

CAREERINDIA



23. ರಷ್ಯಾದಲ್ಲಿ 'ಪಂಚವಾರ್ಷಿಕ ಯೋಜನೆ'ಗಳನ್ನು ಜಾರಿಗೆ ತಂದವರು ಯಾರು ?

24. ಎರಡನೇ ಮಹಾಯುದ್ಧದ ನಂತರ 'ವಿಶ್ವಸಂಸ್ಥೆ'ಯನ್ನು ಏಕೆ ಸ್ಥಾಪಿಸಲಾಯಿತು ?

25. ಅಂತರ್‌ರಾಷ್ಟ್ರೀಯ ಪುನರ್‌ರಚನೆ ಮತ್ತು ಅಭಿವೃದ್ಧಿ ಬ್ಯಾಂಕ್‌ನ ಇನ್ನೊಂದು ಹೆಸರೇನು ?

26. 'ಅಮೆರಿಕಾದ ಗಾಂಧಿ' ಎಂದು ಯಾರನ್ನು ಕರೆಯುತ್ತಾರೆ ?

27. ಸಾರ್ಕ್ ( SAARC ) ನ ಪ್ರಧಾನ ಕಚೇರಿ ಎಲ್ಲಿದೆ ?

28. ಭಾರತದ ರಾಷ್ಟ್ರೀಯ ಪ್ರಾಣಿ ಯಾವುದು ?

29. ಭಾರತದ ಅತ್ಯಂತ ದೊಡ್ಡದಾದ ಸ್ವಾಭಾವಿಕ ಬಂದರು ಯಾವುದು ?

30. ವೈಜ್ಞಾನಿಕ ಬೇಸಾಯ ಎಂದರೇನು ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ***ಎರಡು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. ಮೂರನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣಗಳಾವುವು ?

32. ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್‌ರವರ ಸಾಧನೆಗಳೇನು ?

33. ವೃತ್ತ ಪತ್ರಿಕೆಗಳ ಬೆಳವಣಿಗೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಹೇಗೆ ಪ್ರಭಾವ ಬೀರಿದವು ?

34. ಈಸೂರಿನಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿ ಹೇಗೆ ಭಿನ್ನವಾಗಿತ್ತು ?

35. ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಅಯೂಬ್ ಖಾನ್‌ರವರು ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಹೇಗೆ ಪ್ರಯತ್ನಿಸಿದರು ?

36. ಸರ್ಬಿಯನ್ನರು ಮತ್ತು ಆಸ್ಟ್ರಿಯನ್ನರು ಒಂದನೇ ಮಹಾಯುದ್ಧಕ್ಕೆ ಹೇಗೆ ಕಾರಣರಾದರು ?

www.careerindia.com

CAREERINDIA



37. ಗೊರ್ಬಚೆವ್‌ರವರ ಆಡಳಿತದ ಸಂದರ್ಭದಲ್ಲಿ ರಷ್ಯಾದಲ್ಲಾದ ಬದಲಾವಣೆಗಳಾವುವು ?

38. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂಗೀಕರಿಸಿದ ಯಾವುದಾದರೂ ನಾಲ್ಕು ಮಕ್ಕಳ ಹಕ್ಕುಗಳನ್ನು ಹೆಸರಿಸಿ.

39. ವಿಶ್ವಸಂಸ್ಥೆಯ ಧರ್ಮದರ್ಶಿ ಸಮಿತಿಯನ್ನು ಏಕೆ ಸ್ಥಾಪಿಸಲಾಯಿತು ?

40. ಭಾರತವು ಅಣ್ವಸ್ತ್ರ ಕುಗ್ಗಿಸುವ ಒಪ್ಪಂದಕ್ಕೆ ಸಹಿ ಹಾಕಲು ಏಕೆ ನಿರಾಕರಿಸಿತು ?

41. ಪೂರ್ವ ಕರಾವಳಿ ತೀರವು ಪಶ್ಚಿಮ ಕರಾವಳಿ ತೀರಕ್ಕಿಂತ ಹೇಗೆ ಭಿನ್ನವಾಗಿದೆ ?

42. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಖನಿಜ ಸಂಪನ್ಮೂಲಗಳು ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತವೆ ?

43. 'ಮಧ್ಯ ಗಂಗಾ ಬಯಲು' ವ್ಯವಸಾಯಾಧಾರಿತ ಕೈಗಾರಿಕೆಗಳಿಗೆ ಏಕೆ ಪ್ರಸಿದ್ಧಿಯನ್ನು ಪಡೆದಿದೆ ?

44. ವಿಮಾನಯಾನವು ಭಾರತದಲ್ಲಿ ಏಕೆ ಜನಪ್ರಿಯವಾಗಿಲ್ಲ ?

45. ಕೃಷಿಯು ಕೈಗಾರಿಕೆಗಳ ಅಭಿವೃದ್ಧಿಗೆ ಹೇಗೆ ಸಹಾಯ ಮಾಡುತ್ತದೆ ?

46. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿ ಏಕೆ ಸಮಾಧಾನಕರವಾಗಿರಲಿಲ್ಲ ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಭಾರತದಲ್ಲಿ ಫ್ರೆಂಚರ ಅಧಿಕಾರದ ಅವನತಿಗೆ ಕಾರಣಗಳೇನು ?

48. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳನ್ನು ತಿಳಿಸಿ.

49. ಭಾರತದಲ್ಲಿ ಮಹಿಳೆಯರ ಕಲ್ಯಾಣಕ್ಕಾಗಿ ಸರ್ಕಾರ ಹೇಗೆ ಪ್ರಯತ್ನಿಸುತ್ತಿದೆ ?

50. ಮಣ್ಣಿನ ಸವಕಳಿಯನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳೇನು ?

www.careerindia.com

CAREERINDIA



51. ಕಾಫಿ ಮತ್ತು ಚಹಾ ಬೇಸಾಯಕ್ಕೆ ಅವಶ್ಯಕವಾಗಿರುವ ಭೌಗೋಳಿಕ ಅಂಶಗಳೇನು ?

52. ಚಿಲ್ಲರೆ ವ್ಯಾಪಾರಿಗಳು ಗ್ರಾಹಕರಿಗೆ ಹೇಗೆ ಸೇವೆಗಳನ್ನು ಒದಗಿಸುವರು ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಎಂಟು*** ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಷ್ ಚಂದ್ರಬೋಸ್‌ರ ಪಾತ್ರವನ್ನು ವಿವರಿಸಿ.

54. ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧವನ್ನು ವಿವರಿಸಿ.

55. ಭಾರತದ ವ್ಯವಹಾಯವು ಏಕೆ ಹಿಂದುಳಿದಿದೆ ?

VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : $1 + 3 = 4$

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ಗೋವಾ

c) ಭಾಕ್ರಾ–ನಂಗಲ್ ಯೋಜನೆ

***ಪರ್ಯಾಯ ಪ್ರಶ್ನೆ :*** **ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ (ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ)**

ಭಾರತದ ಜನರ ಜೀವನದ ಮೇಲೆ ಹಿಮಾಲಯ ಪರ್ವತದ ಉಪಯೋಗಗಳೇನು ? 4

www.careerindia.com